ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಜಟಇ/೦೫ ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ :19.06.2024

**ಸುತ್ತೋಲೆ**

ವಿಷಯ: C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು SEE (ಪ್ರಾಯೋಗಿಕ & ಥಿಯರಿ) ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹತೆ (Eligibility) ಬಗ್ಗೆ ಸ್ಪಷ್ಟೀಕರಣ ನೀಡುವ ಕುರಿತು.

ಉಲ್ಲೇಖ:
1) Regulations of Diploma Programme for the Curriculum-2020 ಯ ಕಂಡಿಕೆ 14.2 Makeup Examinations.
2) ಈ ಕಛೇರಿ ಸುತ್ತೋಲೆ ಸಂಖ್ಯೆ: ಜಟಇ/08/ಇಸಿಎಸ್ (3)/2021 ದಿ:26.10.2021
3) ಈ ಕಛೇರಿ ಸುತ್ತೋಲೆ ಸಂಖ್ಯೆ: ಜಟಇ/11/ಇಸಿಎಸ್ (3)/2021 ದಿ:14.10.2022
4) ಈ ಕಛೇರಿ ಸುತ್ತೋಲೆ ಸಂಖ್ಯೆ: ಜಟಇ/5/ಇಸಿಎಸ್ (1)/2023 ದಿ:17.07.2023
5) ಈ ಕಛೇರಿ ಸುತ್ತೋಲೆ ಸಂಖ್ಯೆ: ಜಟಇ/5/ಇಸಿಎಸ್ (1)/2023 ದಿ:20.07.2023
6) ಈ ಕಛೇರಿ ಸುತ್ತೋಲೆ ಸಂಖ್ಯೆ: ಜಟಇ/೦5/ಇಸಿಎಸ್ (1)/2024 ದಿ:18.06.2024

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ Regulations of Diploma Programme for the Curriculum-2020 ಪುಟ ಸಂಖ್ಯೆ14 ರ 14.2 ರಲ್ಲಿ ವಿದ್ಯಾರ್ಥಿಗಳಿಗೆ Makeup Examinations ನಡೆಸುವ ಬಗ್ಗೆ ಪೂರ್ಣ ವಿವರಗಳನ್ನು ನೀಡಲಾಗಿದೆ. ಅದರಂತೆ 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಶೇಕಡ 40ಕ್ಕಿಂತ ಕಡಿಮೆ CIE ಅಂಕ ಗಳಿಸಿರುವ 1 & 2 ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (Not Eligible - NE Students) ಉಲ್ಲೇಖ (2) ರ ಸುತ್ತೋಲೆಯನ್ವಯ Makeup ತರಗತಿಗಳು ಮತ್ತು CIE ಕಿರುಪರೀಕ್ಷೆಗಳನ್ನು ನಡೆಸಲಾಗಿತ್ತು. ತದನಂತರ ಸದರಿ ಕಿರುಪರೀಕ್ಷೆಗಳಲ್ಲಿ ಕನಿಷ್ಠ ಶೇಕಡ 40 ಆಂತರಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮುಂದಿನ Makeup SEE/Regular SEE ಪರೀಕ್ಷೆಗಳಿಗೆ ನೋಂದಾಯಿಸಲು ತಿಳಿಸಲಾಗಿತ್ತು. ಅದೇ ರೀತಿ 2020-21 & 2021-22 ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ CIE ಅಂಕ ಗಳಿಸಿರುವ 1, 2, 3 & 4 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (NE Students) ಮತ್ತು ಹಿಂದಿನ ವರ್ಷದ Makeup CIE ಕಿರುಪರೀಕ್ಷೆಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೂ ಸಹಿತ (NE Students) ಉಲ್ಲೇಖ (3) ರ ಸುತ್ತೋಲೆಯನ್ವಯ Makeup ತರಗತಿಗಳು ಮತ್ತು CIE ಕಿರುಪರೀಕ್ಷೆಗಳನ್ನು ನಡೆಸಲಾಗಿತ್ತು. ಉಲ್ಲೇಖ (4) ರ ಸುತ್ತೋಲೆಯನ್ವಯ 2020-21, 2021-22 & 2022-23 ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40ಕ್ಕಿಂತ ಕಡಿಮೆ CIE ಅಂಕ ಗಳಿಸಿರುವ 1, 2, 3, 4 & 5 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Makeup ತರಗತಿಗಳು ಮತ್ತು CIE ಕಿರುಪರೀಕ್ಷೆಗಳನ್ನು ನಡೆಸಲಾಗಿತ್ತು.

ಮುಂದುವರೆದು, ಹಿಂದಿನ 2020-21, 2021-22 & 2022-23 ನೇ ಶೈಕ್ಷಣಿಕ ಸಾಲುಗಳಲ್ಲಿ ಉಲ್ಲೇಖ (2),(3),(4) & (5) ರನ್ವಯ Makeup ಕಿರುಪರೀಕ್ಷೆಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದು ಪುನ: Not Eligible (NE Students) ಆಗಿರುವಂತಹ ವಿದ್ಯಾರ್ಥಿಗಳೂ ಸೇರಿದಂತೆ, 2023-24ನೇ ಶೈಕ್ಷಣಿಕ ಸಾಲಿನಲ್ಲಿ ಶೇಕಡ 40ಕ್ಕಿಂತ ಕಡಿಮೆ CIE ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ (NE Students) ಉಲ್ಲೇಖ (6)ರ ಸುತ್ತೋಲೆಯಲ್ಲಿ Makeup ತರಗತಿಗಳು ಮತ್ತು CIE ಕಿರುಪರೀಕ್ಷೆಗಳನ್ನು ನಡೆಸುವ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗಿದೆ. ಒಟ್ಟಾರೆಯಾಗಿ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ ಆಂತರಿಕ ಅಂಕಗಳದ್ದು SEE ಪರೀಕ್ಷೆಗಳಿಗೆ ಅರ್ಹತೆ ಇಲ್ಲದ ಎಲ್ಲಾ ವಿದ್ಯಾರ್ಥಿಗಳೂ (NE Students) Makeup CIE ತರಗತಿಗಳಿಗೆ ಹಾಜರಾಗಲು ಮತ್ತು Makeup CIE ಕಿರುಪರೀಕ್ಷೆಗಳನ್ನು ಬರೆಯಲು ಅರ್ಹರಾಗಿರುತ್ತಾರೆ.

ಮೇಲ್ಕಂಡ ಅವಧಿಗಳಲ್ಲಿ ಮಾತ್ರ ನಡೆಸಲಾದ Makeup CIE ಕಿರುಪರೀಕ್ಷೆಗಳ ಆಂತರಿಕ ಅಂಕಗಳನ್ನು ಮಂಡಳಿಯಿಂದ ನೇಮಿಸಲ್ಪಟ್ಟ ಆಂತರಿಕ ಅಂಕಗಳ ಪರಿವೀಕ್ಷಕರು ಪರಿಶೀಲಿಸಿ ದೃಢೀಕರಿಸಿ ಜಟಇಲಿಂಕ್ಸ್ ವೆಬ್ ಪೋರ್ಟಲ್ ಮೂಲಕ ಅಪ್ ಲೋಡ್ ಮಾಡಿದ್ದಲ್ಲಿ/ ಆಂತರಿಕ ಅಂಕಗಳ ಪರಿವೀಕ್ಷಕರು ಪರಿಶೀಲಿಸಿ ದೃಢೀಕರಿಸಿರುವ ಮೂಲ ಆಂತರಿಕ ಅಂಕಗಳ ರಿಜಿಸ್ಟರ್ & ಚೆಕ್ ಲಿಸ್ಟ್ ಗಳ ಮೂಲ ದಾಖಲೆಗಳನ್ನು ಸಂಸ್ಥೆಗಳ ಪ್ರಿನ್ಸಿಪಾಲರುಗಳು ತಾಂತ್ರಿಕ ಪರೀಕ್ಷಾ ಮಂಡಳಿಗೆ ಒದಗಿಸಿದ ನಂತರ ಸಂಬಂಧಪಟ್ಟ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಫಲಿತಾಂಶವನ್ನು ಪ್ರಕಟಿಸಲಾಗುವುದು.

ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸಲ್ಪಡುವ Makeup CIE ಕಿರುಪರೀಕ್ಷೆಗಳಲ್ಲಿ ಕನಿಷ್ಠ ಶೇಕಡ 40 CIE ಅಂಕಗಳನ್ನು ಪಡೆದು ಅರ್ಹತೆ ಹೊಂದುವ ವಿದ್ಯಾರ್ಥಿಗಳು ಮಾತ್ರ Makeup SEE ಪರೀಕ್ಷೆ ಸಹಿತ ಮುಂದಿನ SEE ಪರೀಕ್ಷೆಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸಿ ನೋಂದಾಯಿಸಬಹುದಾಗಿದೆ.

**14.2-------" Makeup " examinations for both Continuous Internal Evaluation (CIE) and Semester End Examination (SEE) shall be scheduled by the BTE well before the commencement of 3rd/5th semester (During Summer Vacation), so as to facilitate the students to reappear in the failed courses (Subjects). However, the respective Institution shall arrange "Makeup" classes for the students in both theory and practical courses, appearing for the "Makeup" examination.** ರಂತೆ ಮೇಲ್ಕಂಡ Makeup CIE ಅವಧಿಗಳನ್ನು ಹೊರತುಪಡಿಸಿ ಸಂಸ್ಥೆಗಳಲ್ಲಿ ನಿಯಮ ಬಾಹಿರವಾಗಿ ನಡೆಸಲಾದ Makeup CIE ಕಿರುಪರೀಕ್ಷೆಗಳು ಮತ್ತು ನೀಡಲಾದ ಅಂಕಗಳನ್ನು ಮಾನ್ಯ ಮಾಡಲಾಗುವುದಿಲ್ಲ ಮತ್ತು ಅಂತಹ ಲೋಪಗಳಿಂದುಂಟಾಗುವ/ ಉದ್ಭವವಾಗುವ ಕಾನೂನಾತ್ಮಕ ತೊಂದರೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ಪ್ರಿನ್ಸಿಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

ಕಾರ್ಯದರ್ಶಿ

ಲಗತ್ತು: ಉಲ್ಲೇಖ (2, (3), (4), (5) & (6) ರ ಪ್ರತಿಗಳು

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ- ಮುಂದಿನ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ

ಪ್ರತಿ: 1. ಇ-ಆಡಳಿತ ವೆಬ್ ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ- ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲ
3. ಮಾನ್ಯ ನಿರ್ದೇಶಕರ ಆಪ್ತ ಶಾಖೆ
4. ಉಪ ನಿರ್ದೇಶಕರು, (ಪರೀಕ್ಷೆ)
3. ಇಎಪಿ ವಿಭಾಗಕ್ಕೆ – ಮಾಹಿತಿಗಾಗಿ
4. ಸಾರ್ವಜನಿಕ ಸಂಪರ್ಕಾಧಿಕಾರಿ – ಮಾಹಿತಿಗಾಗಿ